10

**ದಿನಾಂಕಃ 15-11-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.**

ಪಾಟೀ ಸವಾಲುಃ ಪ್ರತಿವಾದಿ 4 ರ ಪರ ಶ್ರೀ ಬಿ ಎಸ್ ಎನ್ ವಕೀಲರಿಂದಃ

**1.** ನಾನು ನಿವೃತ್ತ ಬ್ಯಾಂಕ್ ಅಧಿಕಾರಿ ಇರುತ್ತೇನೆ ಎಂದರೆ ಸರಿ. ನಾನು ಜನವರಿ 2022 ರಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಾನು ನಿವೃತ್ತಿ ಹೊಂದುವ ಪೂರ್ವದಲ್ಲಿ ಆರು ವರ್ಷಗಳ ಕಾಲ ಕರ್ನಾಟಕ ಬ್ಯಾಂಕಿನ ಮುಖ್ಯ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದೆನು. ನಾನು ನಿವೃತ್ತಿ ಹೊಂದುವ ಕಾಲಕ್ಕೆ ಮುಖ್ಯ ವ್ಯವಸ್ಥಾಪಕರು ಎಂದು ಕೆಲಸ ನಿರ್ವಹಿಸುತ್ತಿದ್ದೆ. ನಾನು ನಿವೃತ್ತಿ ಹೊಂದುವ ಕಾಲಕ್ಕೆ ಬ್ಯಾಂಕಿನಲ್ಲಿ ಗ್ರಾಹಕರ ಕುಂದು ಕೊರತೆ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದೆ. ನಾನು ಕೆಲಸಕ್ಕೆ ಸೇರಿದಾಗಿನಿಂದ ಪ್ರತ್ಯೇಕವಾಗಿ ವಾಸ ಮಾಡುತ್ತಾ ಇದ್ದೆವು ಎಂದರೆ ಸರಿ. ನಾನು ಎಲ್ಲಿ ಕೆಲಸ ನಿರ್ವಹಿಸುತ್ತಿದ್ದೆನೋ ಅಲ್ಲಲ್ಲಿ ಮನೆ ಮಾಡಿಕೊಂಡು ವಾಸ ಇದ್ದೆ. ನಾನು ಮನೆಯಲ್ಲಿ ಏನಾದರು ವಿಶೇಷ ಕಾರ್ಯಕ್ರಮ ವಿದ್ದರೆ ಮಾತ್ರ ಊರಿಗೆ ಬರುತ್ತಿದ್ದೆ ಎಂದರೆ ಸಾಕ್ಷಿ ವಿಶೇಷ ಕಾರ್ಯಕ್ರಮಗಳಲ್ಲಿ ಹಾಗೂ ತಾಯಿಯ ಆರೋಗ್ಯ ಸಂಬಂಧ ಊರಿಗೆ ಬಂದು ಹೋಗುತ್ತಿದ್ದೆ ಎಂದು ಉತ್ತರಿಸಿರುತ್ತಾರೆ.

2. ನಮ್ಮ ಬ್ಯಾಂಕಿನಲ್ಲಿ ಕೌಟುಂಬಿಕ ವಿಮಾ ಪಾಲಿಸಿ ನಮಗೆ ಇರುತ್ತದೆ ಎಂದರೆ ಸರಿ. ನನ್ನ ತಾಯಿಗೆ ವಯೋವೃದ್ಧ ಸಹಜ ಕಾಯಿಲೆ ಹಾಗೂ 15 ವರ್ಷಗಳಿಂದ ಕಣ್ಣು ಕಾಣುತ್ತಿರಲ್ಲಿ ಹಾಗೂ 30 ವರ್ಷಗಳಿಂದ ಕಿವಿ ಸರಿಯಾಗಿ ಕೇಳುತ್ತಿರಲ್ಲಿ ಎಂದರೆ ಸರಿ. ನಮ್ಮ ತಾಯಿ ವರ್ಷದಲ್ಲಿ 2-3 ತಿಂಗಳು ನಮ್ಮ ಜೊತೆ ಯಲ್ಲಿ ಇದ್ದಾಗ ನಾನು ವೈಧ್ಯಕೀಯ ಸೌಕರ್ಯಗಳನ್ನು ಮಾಡಿರುತ್ತೇನೆ. ತುಮಕೂರಿನ ಕಾರ್ಟಿಯ ಆಸ್ಪತ್ರೆಯಲ್ಲಿ ಕಿವಿ ಸಂಬಂಧ ಡಾಃ ನಾಗೇಂದ್ರ ಪ್ರಸಾದ್ ಇವರ ಬಳಿ ತೋರಿಸಿರುತ್ತೇನೆ . ಸದರಿ ವೈಧ್ಯರ ಕ್ವಾಲಿಫಿಕೇಶನ್ ಏನು ಎಂದು ನಾನು ದಾಖಲೆ ಕೊಟ್ಟಿರುತ್ತೇನೆ. ಸದರಿ ವೈಧ್ಯರು ಕಿವಿ ತಜ್ಞರು ಇರುತ್ತಾರೆ. ನಮ್ಮ ತಾಯಿಗೆ ಚಿಕಿತ್ಸೆ ಕೊಡಿಸಿದ ಸಂಬಂಧ ನನ್ನ ಬಳಿ ಇದ್ದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ಈ ರೀತಿ ದಾಖಲೆಗಳನ್ನು ನ್ಯಾಯಲಯಕ್ಕೆ

ಹಾಜರುಪಡಿಸಿದೇ ಇದ್ದರು ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ಸಹೋದರರು ಈ ದಾವೆಯಲ್ಲಿ ಏನು ತಕರಾರು ಹಾಕಿರುತ್ತಾರೆ ಸಾಕ್ಷಿ ನಮ್ಮ ತಾಯಿಗೆ ಆರೋಗ್ಯ ಸರಿ ಇಲ್ಲದ ಬಗ್ಗೆ ಹೇಳಿರುತ್ತಾರೆ. ಸದರಿ ತಕರಾರನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ತಕರಾರಿನಲ್ಲಿ ನಾನು ತುಮಕೂರು ಆಸ್ಪತ್ರೆಯಲ್ಲಿ ನಮ್ಮ ತಾಯಿಗೆ ಚಿಕಿತ್ಸೆ ಕೊಡಿಸಿದ ಬಗ್ಗೆ ಹೇಳಿರುತ್ತೇನೆ. ನನ್ನ ತಾಯಿ 4 ರಿಂದ 10 ನೇ ತರಗತಿಯ ವರೆಗೆ ವಿಧ್ಯಾಭ್ಯಾಸ ಮಾಡಿರುತ್ತಾರೆ. ನನ್ನ ತಾಯಿ ಕನ್ನಡ ದಿನಪತ್ರಿಕೆಗಳನ್ನು ಓದುತ್ತಿದ್ದರು ಎಂದರೆ ಸರಿ. ನಮ್ಮ ತಾಯಿ ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು ಎಂದರೆ ಸರಿ. ನಾನು ನನ್ನ ತಾಯಿಯ ಸಹಿಯನ್ನು ನೋಡಿರುತ್ತೇನೆ. ನಾನು ಈಗ ನಮ್ಮ ತಾಯಿಯ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನಿಶಾನೆ ಡಿ - 1 ನ್ನು ತೋರಿಸಲಾಗಿ ಸದರಿ ನಿಡಿ - 1 ರಲ್ಲಿ ಸಾಕ್ಷಿ ತನ್ನ ತಾಯಿಯ ಸಹಿಯನ್ನು ನೋಡಿ ಗುರುತಿಸಿದ್ದು ಸದರಿಯವರ ಸಹಿಯನ್ನು ಈಗಾಗಲೇ ನಿಡಿ - 1(ಎ) ಯಿಂದ (ಜೆ ) ವರೆಗೆ ಗುರುತಿಸಲಾಗಿರುತ್ತದೆ. ನಿಡಿ - 1 ನಮ್ಮ ಕುಟುಂಬದಲ್ಲಿ ಆದ ವಿಭಾಗ ಪತ್ರ ಇರುತ್ತದೆ ಎಂದರೆ ಸರಿ . ನಿಡಿ - 1 ರಲ್ಲಿ ಬರೆದಿರುವ ವಿಚಾರಗಳು ಎಲ್ಲವೂ ಸತ್ಯವಾಗಿರುತ್ತದೆ ಎಂದರೆ ಸರಿ . ನಿಡಿ - 1 ರಲ್ಲಿ ನಮೂದಿಸಿರುವ ಆಸ್ತಿಗಳನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಆಸ್ತಿಗಳು ಇರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

4. ನಿಪಿ- 9 ರಂತೆ ನಾನು ಮತ್ತು ನನ್ನ ಎಲ್ಲಾ ಸಹೋದರರು ಸೇರಿಕೊಂಡು ನೋಟೀಸು ನೀಡಿರುತ್ತೇವೆ ಎಂದರೆ ಸರಿ . ನಿಪಿ- 9 ರಲ್ಲಿ ತೋರಿಸಿದಂತಹ ಆಸ್ತಿಯಲ್ಲಿ ನನಗೂ ಪಾಲು ಇರುತ್ತದೆ ಎಂದು ಕೇಳಿರುತ್ತೇನೆ ಎಂದರೆ ಸರಿ . ನಿಪಿ- 9 ಅನ್ನು ಕಳುಹಿಸುವ ಕಾಲಕ್ಕೆ ಪ್ರತಿವಾದಿ 4 ರವರನ್ನು ಹೊರತು ಪಡಿಸಿ ನಾವೆಲ್ಲಾ ಸಹೋದರರರು ಒಟ್ಟಿಗೆ ಸೇರಿ ಪಾಲು ಕೇಳಿದ್ದೆವು ಎಂದರೆ ಸರಿ . ನಾವು ಪ್ರತಿವಾದಿ 4 ರವರನ್ನು ಹೊರತುಪಡಿಸಿ ಉಳಿದ ಸಹೋದರರು ರಾಮು/ವಾದಿ ಮುಖಾಂತರ ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ . ಈ ದಾವೆಯಲ್ಲಿನ ವಿಚಾರ ಪ್ರತಿವಾದಿ 4 ರವರನ್ನು ಹೊರತುಪಡಿಸಿ ನಮ್ಮ ಎಲ್ಲರಿಗೂ

ಗೊತ್ತಿತ್ತು ಎಂದರೆ ಸರಿ .ಸಾಕ್ಷಿ ಮುಂದುವರೆದು ಕಾನೂನು ತಿಳುವಳಿಕೆ ಪತ್ರದ ಮುಖಾಂತರ ಹೇಳಿದ್ದೆವು ಎಂದು ಉತ್ತರಿಸುತ್ತಾರೆ. ರಾಮು/ವಾದಿಯ ಜೊತೆ ನಾವು ಸೇರಿಕೊಂಡು ಈ ದಾವೆಯನ್ನು ಹೂಡಬಹುದಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಎಲ್ಲರಿಗೂ ಸಮಾನ ಪಾಲು ಇತ್ತು ಎಂದು ಉತ್ತರಿಸಿರುತ್ತಾರೆ. 4 ನೇ ಪ್ರತಿವಾದಿಯನ್ನು ಹೊರತುಪಡಿಸಿ ನಾವು ಎಲ್ಲಾ ಸಹೋದರರು ಮಾತಾಡಿಕೊಂಡು ವಾದಿಯ ವಕೀಲರಿಗೆ ವಿಚಾರ ತಿಳಿಸಿ ಈ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿ . ನಮ್ಮ 7 ಜನ ಸಹೋದರರಿಗೆ ರಾಮು ಸಲ್ಲಿಸಿದ ದಾಖಲೆಗಳ ಬಗ್ಗೆ 4 ಪ್ರತಿವಾದಿಯನ್ನು ಹೊರತುಪಡಿಸಿ ಎಲ್ಲರಿಗೂ ಮಾಹಿತಿ ಇತ್ತು ಎಂದರೆ ಸರಿ .

5. ಎಸ್ ಎಸ್ ರಜತ್ ಕುಮಾರ್ ಇವರು 1 ನೇ ಪ್ರತಿವಾದಿಯ ಮಗ ಎಂದರೆ ಸರಿ . ವಾದಿ ಹಾಜರುಪಡಿಸಿರುವ ನಿಪಿ- 2 ಮತ್ತು 3 ನ್ನು ರಜತ್ ಕುಮಾರ್ ಎನ್ನುವರು ಪಡೆದುಕೊಂಡಿರುತ್ತಾರೆ ಎಂದರೆ ಸರಿ . ಸಾಮಾನ್ಯವಾಗಿ ಯಾವುದೇ ಒಬ್ಬ ವ್ಯಕ್ತಿಯ ಅಕೌಂಟ್ ಎಕ್ಸಟ್ರಾಕ್ಟ್ ಅನ್ನು ಪಡೆದುಕೊಳ್ಳಬೇಕಾದರೆ ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿ ಹಾಗೂ ಋಾವ ಕಾರಣಕ್ಕಾಗಿ ಸದರಿ ದಾಖಲೆ ಬೇಕಾಗುತ್ತದೆ ಎಂಬುದರ ಬಗ್ಗೆ ತಿಳಿಸಬೇಕು ಎಂದರೆ ಸರಿ . ಒಬ್ಬ ವ್ಯಕ್ತಿ ಜೀವಂತ ಇದ್ದರೆ ಆತನ ಅಕೌಂಟ್ ಎಕ್ಸಟ್ರಾಕ್ಟ್ ಪ್ರತಿ ಕೇಳಿದರೆ ಅದರ ಬಗ್ಗೆ ಆತನಿಗೆ ಮಾಹಿತಿ ಕೊಡಬೇಕು ಎಂದರೆ ಸರಿ. ಖಾತೆದಾರರು ಅಕೌಂಟ್ ಎಕ್ಸಟ್ರಾಕ್ಟ್ ಪ್ರತಿಯನ್ನು ಕೊಡಲು ಒಪ್ಪಿದರೆ ಅವಾಗ ಮಾತ್ರ ಆತನ ಅಕೌಂಟ್ ಎಕ್ಸಟ್ರಾಕ್ಟ್ ಅನ್ನು ಕೊಡಬೇಕಾಗುತ್ತದೆ ಎಂದರೆ ಸರಿ. ಒಬ್ಬ ವ್ಯಕ್ತಿ ತೀರಿಕೊಂಡರೆ ಆತನ ಮರಣ ಪ್ರಮಾಣ ಪತ್ರ, ಮೃತರ ಕುಟುಂಬ ಜೀವಂತ ಸದಸ್ಯರ ದೃಢಿಕರಣ ಪತ್ರ ಹಾಗೂ ಅರ್ಜಿಯನ್ನು ಪಡೆದುಕೊಂಡು ಆತನ ವಾರಸುದಾರನಿಗೆ ಅಕೌಂಟ್ ಎಕ್ಸಟ್ರಾಕ್ಟ್ ಪ್ರತಿಯನ್ನು ಕೊಡಬೇಕಾಗುತ್ತದೆ ಎಂದರೆ ಸರಿ. ಸದರಿ ಅಕೌಂಟ್ ಎಕ್ಸಟ್ರಾಕ್ಟ್ ಪ್ರತಿಯಲ್ಲಿ ಬ್ಯಾಂಕ್ ವ್ಯವಸ್ಥಾಪಕರು ಇಂತಹ ವ್ಯಕ್ತಿಯ ಕೋರಿಕೆಯ ಮೇರೆಗೆ ಅಕೌಂಟ್ ಎಕ್ಸಟ್ರಾಕ್ಟ್ ಪ್ರತಿಯನ್ನು ಕೊಡುತ್ತಿದ್ದೇನೆ ಎಂದು ಬರೆಯ ಬೇಕು ಎಂದರೆ ಸರಿ. ಅಕೌಂಟ್ ಎಕ್ಸಟ್ರಾಕ್ಟ್ ಪ್ರತಿಯನ್ನು ಕೊಡಬೇಕಾದರೆ ಕನಿಷ್ಟ ಖರ್ಚನ್ನು ಕಡಿತಗೊಳಿಸಿ ದಾಖಲೆ ಕೊಡುತ್ತಾರೆ ಎಂದರೆ ಸರಿ.

6. ಸಮಾನ್ಯವಾಗಿ 2000 ಇಸವಿಯಿಂದ 2010 ರವರೆಗೆ ಎಲ್ಲಾ ಖಾತೆಗಳು ಕಂಪ್ಯೂರೈಸಡ್ ಕರಣ ಗೊಂಡಿರುತ್ತದೆ. ಯಾವದೇ ಅಕೌಂಟ್ ಎಕ್ಸಟ್ರಾಕ್ಟ್ ಪ್ರತಿಯನ್ನು ಕೊಡುವಾಗ ನಾವು ಕಂಪ್ಯೂಟರ್ ನಿಂದ ಜನಕಿಕರಣಗೊಂಡು ಪಡೆದಿರುತ್ತೇವೆ ಎಂದು ಮಾತ್ರ ಬರೆಯಬೇಕು ಎಂದರೆ ಸಾಕ್ಷಿ ಆ ರೀತಿ ಬರೆಯಬೇಕು ಎಂದು ಅವಶ್ಯಕತೆ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾವು ಯಾವುದೇ ಅಕೌಂಟ್ ಎಕ್ಸಟ್ರಾಕ್ಟ್ ಅನ್ನು ಪಡೆದುಕೊಂಡಾಗ ಅದರಲ್ಲಿ ಸಮಯ ಮತ್ತು ದಿನಾಂಕ ಡಿಜಿಟಲ್ ಆಗಿ ಬಂದಿರುತ್ತದೆ ಎಂದರೆ ಸರಿ. ಕೆ ವೈ ಸಿ ಯ ಪ್ರಕಾರ ಎಲ್ಲಾ ಖಾತೆದಾರರು ತಮ್ಮ ಖಾತೆಗೆ ದೂರವಾಣಿ ಸಂಖ್ಯೆಯನ್ನು ನಮೂದಿಸುವುದು ಕಡ್ಡಾಯ ಇತ್ತು ಎಂದರೆ ಸರಿ. ಕೆ ವೈ ಸಿ ಯನ್ನು ಖಾತೆದಾರರಿಗೆ ವಂಚನೆಯಾದ ಸಮಯದಲ್ಲಿ ಅವನ ಗಮನಕ್ಕೆ ತರುವ ಸಲುವಾಗಿ ದೂರವಾಣಿ ಸಂಖ್ಯೆ ಯ ಸಂಪರ್ಕವನ್ನು ತೆಗೆದುಕೊಳ್ಳುತ್ತೇವೆ ಎಂದರೆ ಸರಿ.

7. ನಿಪಿ- 33 ರಲ್ಲಿ ದಿನಾಂಕ 04-02-2023 ರಂದು ರೂ. 7000/- ಹಣ ರಜತ್ ಕುಮಾರ್ ಈತನು ವಿತ್ ಡ್ರಾ ಮಾಡಿರುತ್ತಾನೆ ಎಂದರೆ ಸರಿ. ದಿನಾಂಕ 30-06-2023 ರಂದು ನನ್ನ ತಾಯಿಯ ಖಾತೆಯಿಂದ ರಜತ್ ಕುಮಾರ್ ಖಾತೆಗೆ ಹೋಗಿ ಪುನಃ ನಮ್ಮ ತಾಯಿಯ ಖಾತೆಗೆ ರೂ. 4900/- ಪುನಃ ಬಂದಿರುತ್ತದೆ ಎಂದರೆ ಸರಿ. ದಿನಾಂಕ 30-06-2023 ರಂದು ನನ್ನ ತಾಯಿ ಖಾತೆಯಿಂದ ರೂ. 4900/- ರಜತ್ ಕುಮಾರ್ ಈತನ ಖಾತೆಗೆ ಹೋದ ಕಾರಣ 4 ನೇ ಪ್ರತಿವಾದಿಯ ಮೊಬೈಲ್ ಗೆ ಸಂದೇಶ ಬಂದಿದ್ದು ಆತನು ಬ್ಯಾಂಕಿನಲ್ಲಿ ಹೋಗಿ ವಿಚಾರಣೆ ಮಾಡಿದಾಗ ಬ್ಯಾಂಕಿನವರು ಪುನಃ ನಮ್ಮ ತಾಯಿಯ ಖಾತೆಗೆ ಹಣವನ್ನು ಜಮಾ ಮಾಡಿರುತ್ತಾರೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಏನು ಹೇಳಲು ಆಗುವುದಿಲ್ಲ. ಈ ರೀತಿ ನಮ್ಮ ತಾಯಿಯ ಖಾತೆಗೆ ಬ್ಯಾಂಕಿನವರು ಹಣ ಜಮಾ ಮಾಡಿರುವ ವಿಚಾರ ಗೊತ್ತಿದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾಯಿಯ ಏ ಟಿ ಎಂ ಕಾರ್ಡ್ ಅನ್ನು ರಜತ್ ಕುಮಾರ್ ಈತನು ಇಟ್ಟು ಕೊಂಡಿದ್ದನು ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ. ರಜತ್ ಕುಮಾರ್ ಈತನು ತುಳುವಿನ ಕೊಪ್ಪ ಗ್ರಾಮ ಪಂಚಾಯ್ತಿಯಲ್ಲಿ ನೌಕರಿ ಮಾಡುತ್ತಾನೆ ಎಂದರೆ ಸರಿ. ನಿಪಿ- 33 ರ ಕೊನೆಯ ಪುಟದಲ್ಲಿ ಯಾವ

ದಿನಾಂಕದಂದು ಅಕೌಂಟ್ ಎಕ್ಸಟ್ರಾಕ್ಟ್ ಅನ್ನು ಪಡೆದ ಬಗ್ಗೆ ದಿನಾಂಕ ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ಮೊದಲನೆ ಪುಟದಲ್ಲಿ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನಿಪಿ- 33 ರ ಕೊನೆಯ ಪುಟದಲ್ಲಿ ದಿನಾಂಕ ನಮೂದು ಇರುವುದಿಲ್ಲ ಎಂದರೆ ಸರಿ. ಕೆ ವೈ ಸಿ ನಿಯಮಗಳ ಪ್ರಕಾರ ಅಕೌಂಟ್ ನಂಬರ್, ಆಧಾರ ಕಾರ್ಡ್, ದೂರವಾಣಿ ಸಂಖ್ಯೆ, ಅಕೌಂಟ್ ಎಕ್ಸಟ್ರಾಕ್ಟ್ ನ ಮುಖ ಪುಟದಲ್ಲಿ ಬರಬೇಕು ಎಂದರೆ ಸರಿ. ನಿಪಿ- 33 ರಲ್ಲಿ ಅಕೌಂಟ್ ನಂಬರ್, ಆಧಾರ ಕಾರ್ಡ್ , ದೂರವಾಣಿ ಸಂಖ್ಯೆ ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ಕೈ ಬರವಣಿಗೆಯಲ್ಲಿ ದೂರವಾಣಿ ಸಂಖ್ಯೆ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನಿಪಿ- 33 ರ ಅಕೌಂಟ್ ಎಕ್ಸಟ್ರಾಕ್ಟ್ ಅನ್ನು ನಾಮ ನಿರ್ದೇಶಕ ವ್ಯಕ್ತಿಯಾದ ರಜತ್ ಕುಮಾರ್ ಪಡೆದುಕೊಂಡಿರುತ್ತಾರೆ. ನಿಪಿ- 33 ರಲ್ಲಿ ರಜತ್ ಕುಮಾರ್ ಇವರಿಗೆ ಅಕೌಂಟ್ ಎಕ್ಸಟ್ರಾಕ್ಟ್ ಪ್ರತಿಯನ್ನು ಕೊಟ್ಟ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ- 33 ಅನ್ನು ರಜತ್ ಕುಮಾರ್ ಈತನಿಗೆ ಕೊಟ್ಟ ಬಗ್ಗೆ ಕವರಿಂಗ್ ಲೆಟರ್ ಇದೆಯ ಎಂದರೆ ಸಾಕ್ಷಿ ನೋಡಿ ಹೇಳಬೇಕೆಂದು ಉತ್ತರಿಸಿರುತ್ತಾರೆ. ನಿಪಿ- 33 ಅನ್ನು ಕೊಟ್ಟ ಬಗ್ಗೆ ಖರ್ಚು ವಹಿಸಿದ ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿ ಸದರಿ ಖಾತೆ ಮುಚ್ಚಲಾದ ಕಾರಣ ಖರ್ಚು ಉದ್ಭವಿಸುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಖರ್ಚನ್ನು ಆಗಲೇ ಬ್ಯಾಂಕಿನವರು ಉಚಿತವಾಗಿ ಅಕೌಂಟ್ ಎಕ್ಸಟ್ರಾಕ್ಟ್ ಅನ್ನು ಕೊಡಲು ಬರುವುದಿಲ್ಲ ಎಂದರೆ ಸಾಕ್ಷಿ ಬ್ಯಾಂಕಿಗೆ ಬಿಟ್ಟ ವಿಚಾರ ಎಂದು ಉತ್ತರಿಸಿರುತ್ತಾರೆ. ನಿಪಿ- 33 ರಲ್ಲಿ ಫೋನ್ ನಂಬರ್ ಬರೆದ ಕೆಳಗಡೆ ಬ್ಯಾಂಕ್ ಅಧಿಕಾರಯವರ ಸಹಿ ಇರವುದಿಲ್ಲ ಎಂದರೆ ಸಾಕ್ಷಿ ಬ್ಯಾಂಕಿಗೆ ಬಿಟ್ಟ ವಿಚಾರ ಎಂದು ಉತ್ತರಿಸಿರುತ್ತಾರೆ. ನಾನು ನನ್ನ ಅಧಿಕಾರವನ್ನು ಬಳಸಿಕೊಂಡು ನಿಪಿ- 33 ಅನ್ನು ಪಡೆಯಲು ಪ್ರಭಾವ ಬಳಸಿರುತ್ತೇನೆ ಎಂದರೆ ಸರಿಯಲ್ಲ.

8. ನಿಪಿ- 31 ಮತ್ತು 32 ಅನ್ನು ಯಾರು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ವಾದಿ ಪಡೆದುಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ. ನಿಪಿ- 31 ಮತ್ತು 32 ಅನ್ನು ವಾದಿ ಪಡೆದುಕೊಂಡಿರುವ ವಿಚಾರ ನನ್ನ ಗಮನಕ್ಕೆ ಇತ್ತು ಎಂದರೆ ಸರಿ. ನನ್ನ ತಾಯಿ ಆರೋಗ್ಯ ವಂತರಿದ್ದು ಅವರಿಗೆ ವ್ಯವಹಾರಿಕ ಜ್ಞಾನ ಇತ್ತು ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ದಾನ ಪತ್ರದ ಮುಖಾಂತರ ಬಂದ ದಾವಾ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ನಾನು

ಹಾಗೂ ಉಳಿದ ಸಹೋದರರು ಸೇರಿಕೊಂಡು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ತೆಂಗಿನ ಮನೆ ಜನತಾ ಕಾಲೊನಿಯ ಮೂರು ನಿವೇಶನ ಹಾಗೂ ಕಲ್ಕೆರೆಯಲ್ಲಿರುವ ನಿವೇಶನವನ್ನು ಉದ್ದೇಶಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿ ವಿಭಾಗ ಪತ್ರದಲ್ಲಿ ನಮೂದಿಸಿರುವ ಅಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ನನಗೆ ತೆಂಗಿನ ಮನೆ ಜನತಾ ಕಾಲೋನಿ ಹಾಗುಾ ಕಲ್ಕೇರಿಯಲ್ಲಿರುವ ನಿವೇಶನದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಹಾಗೂ ಸದರಿ ನಿವೇಶನಗಳು ಈಗ ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ- 33 ಅನ್ನು ಕೊಡುವ ಕಾಲಕ್ಕೆ ಬ್ಯಾಂಕ್ ಅಧಿಕಾರಿಗಳು ವಿಚಾರ ತಿಳಿಸಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 4 ನೇ ಪ್ರತಿವಾದಿಗೆ ಸಂಬಂಧಿಸಿದ ದಾವಾ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ನಾವು ಸಹೋದರರು ಸೇರಿಕೊಂಡು ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-33 ಅನ್ನು ನಾನು ಪ್ರಭಾವ ಬೀರಿ ಪಡೆದುಕೊಂಡ ದಾಖಲೆ ಇರುತ್ತದೆ ಎಂದರೆ ಸರಿಯಲ್ಲ. ನಾವು ಬ್ಯಾಂಕಿನ ನಿಯಮಗಳನ್ನು ಉಲ್ಲಂಘನೆ ಮಾಡಿ ನಿಪಿ- 33 ಅನ್ನು ಪಡೆದುಕೊಂಡ ದಾಖಲೆ ಇರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ತಾಯಿಗೆ ಯಾವತ್ತೂ ಚಿಕಿತ್ಸೆ ಕೊಡಿಸಿರುವುದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ 7 ಜನ ಸಹೋದರರಲ್ಲಿ ಕೆಲವೊಬ್ಬರಿಗೆ ಕಿವಿ ಕೇಳಿಸದೇ ಇರುವ ಸಮಸ್ಯೆ ಇರುತ್ತದೆ ಎಂದರೆ ಸಾಕ್ಷಿ ಕೆಲವೊಬ್ಬರಿಗೆ ಇರುತ್ತದೆ ಎಂದು ಉತ್ತರಿಸುತ್ತಾರೆ. ಸುಧಾಕರ ಭಟ್, ತಂದೆಃ ವೆಂಕಟರಮಣ ಶಾಸ್ತ್ರೀ ಇವರು ನಮ್ಮ ದೂರದ ಸಂಬಂಧಿಕರು ಎಂದರೆ ಸರಿ. ನಾನು 4 ನೇ ಪ್ರತಿವಾದಿಗೆ ಮೋಸ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಅಸಲು ದಾವಾ ನಂಃ 46/2022
ಡಿ ಡಬ್ಲ್ಯುಃ1

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ